**Government of Karnataka**
**Deposition Sheet (R.P.N.57) Form 4 Criminal**

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ದೇವದುರ್ಗ

ಸಿ.ಸಿ. ನಂ. 33/2021

| ಹೆಸರು | ಬಶೀರಅಹ್ಮದ್ | ಪಿ. ಡಬ್ಲ್ಯೂ ಃ ೮ |
|---|---|---|
| ತಂದೆಯ ಹೆಸರು | ಮಹ್ಮದ್ ಶಾಲಂಸಾಬ | ಸಿ. ಡಬ್ಲ್ಯೂ ಃ ೮ |
| ವಯಸ್ಸು | 36 ವರ್ಷ | |
| ಉದ್ಯೋಗ | ಜೀಪ್ ಚಾಲಕರು ತಹಶೀಲ್ದಾರ ಕಚೇರಿ ದೇವದುರ್ಗ | **ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ** |
| ವಾಸ | ದೇವದುರ್ಗ | 21-04-2026 |

**ಮುಖ್ಯ ವಿಚಾರಣೆಃ** ಮಾನ್ಯ ಸ.ಸ.ಅ. ರವರಿಂದಃ

ನಾನು ದಿನಾಂಕ: 20-08-2020 ರಿಂದ ಇಲ್ಲಿಯವರೆಗೆ ರವರೆಗೆ ದೇವದುರ್ಗ ತಹಶೀಲ್ದಾರ ಕಚೇರಿಯಲ್ಲಿ ಜೀಪ್ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ, ಘಟನೆಯ ಕುರಿತು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ:**

ದಿನಾಂಕ: 24-08-2020 ರಂದು ನಾನು ಮತ್ತು ಚಾಸಾ-1 ರವರು ಸಂಚರಿಸುತ್ತಿದ್ದಾಗ, ಸಂಜೆ 7-45 ಗಂಟೆಗೆ ಅಯ್ಯಪ್ಪ ದವಾಖಾನೆ ಎದುರುಗಡೆ ಹೋದಾಗ, ನಿರಂಜನ ಎನ್ನುವಾತ ಗಣೇಶ ಮೂರ್ತಿಯನ್ನು ಪ್ರಷ್ಠಾಪಿಸಿದ್ದಿ ಅಲ್ಲಿ ಸ್ಪೀಕರಗಳನ್ನು ಇಟ್ಟುಕೊಂಡಿದ್ದು, ಆ ಸಮಯದಲ್ಲಿ ಕೋವಿಡ್ -19 ನಿಯಮಾವಳಿಗಳು ಜಾರಿಯಲ್ಲಿದ್ದು, ದಿನಾಂಕ: 17-08-2020 ರಂದು ಮಾನ್ಯ ಕರ್ನಾಟಕ ಸರ್ಕಾರದ ಆದೇಶದಂತೆ ಕೋವಿಡ್ ನಿಯಮಾವಳಿಗಳನ್ನು ಪಾಲಿಸದೇ ಅದನ್ನು ಉಲ್ಲಂಘನೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-1

ರವರು ಸ್ಪೀಕರಗಳನ್ನು ಹಾಕಬೇಡಿ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದು ಮತ್ತು ಸಾಮಾಜಿಕ ಅಂತರ ಕಾಯಿದುಕೊಳ್ಳಲಿಲ್ಲ, ಥರ್ಮಲ್ ಸ್ಕ್ರಿನಿಂಗ್ ವ್ಯವಸ್ಥೆ ಇರಲಿಲ್ಲ ಎಂದರೆ ಸರಿಯಲ್ಲ. ಆಗ ಆರೋಪಿತರು ನಾವು ಹಿಂದೂ ಗಣೇಶವನ್ನು ಇಟ್ಟಿದ್ದು ಎಲ್ಲಾ ಕಡೆ ಹಾಕುತ್ತಾರೆ, ಮುಸ್ಲಿಂರ ಮೈಕನ್ನು ಬಂದ್ ಮಾಡಿಸಿ, ಮುಸ್ಲಿಂರ ಮೈಕ್ ನಿಮಗೆ ಕಾಣುವುದಿಲ್ವಾ ಎಂದು ನಾವು ಏಕೆ ಹಾಕಬಾರದೆಂದು ನನಗೆ ಹೇಳಿರುತ್ತಾನೆ. ಆಗ ಆಗ ಸೌಂ ಡ್ ಬಾಕ್ಸ್‌ಗಳನ್ನು ಜೀಪಿಗೆ ಹಾಕಿ ಎಂದು ಚಾಸಾ-1 ರವರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಾವೆ ತೆಗೆದುಕೊಂಡು ಹೋಗಿರುತ್ತೇವೆ ಎಂದು ಹೇಳಿ ಗಾಡಿಯನಲ್ಲಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರು ಪಿ ಎಸ್ ಐ ರವರಿಗೆ ಪೋನ್ ಮಾಡಿ ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ಆ ಸಮಯದಲ್ಲಿ ಪಿ ಎಸ್ ಐ ಮತ್ತು ಇಬ್ಬರು ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸೌಂಡ್ ಬಾಕ್ಸ್‌ಗಳನ್ನು ಸ್ಥಳದಿಂದ ತೆಗೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರು ತಡೆಯಲು ಹೋದಾಗ, ಆರೋಪಿತರು ಅವರನ್ನು ತಳ್ಳಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ತನ್ನ ಗೆಳೆಯರಿಗೆ ಪೋನ್ ಮಾಡಿ ಸ್ಥಳಕ್ಕೆ ಬರಲು ತಿಳಿಸಿರುತ್ತಾನೆ ಮತ್ತು ವಿಡಿಯೋ ಮಾಡಿ ಇವರೇನು ಪಿ ಎಸ್ ಐ ಇದ್ದೀರಾ ನಿಮಗೆ ದೇವದುರ್ಗ ಬರೆದುಕೊಟ್ಟಿದ್ದಾರೆಯೇ ನೀವು ಡಿ ಸಿ ಇದ್ದೀರಾ ಎಂದು ಹೇಳಿರುತ್ತಾನೆ. ಇಬ್ಬರು ಪಿ ಸಿ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ಅವರಿಗೆ ಸ್ಪೀಕರಗಳನ್ನು ವಾಪಸ್ಸು ಕೊಡಬೇಕೆಂದು ಅವರಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಕೃತ್ಯದಿಂದ ಚಾಸಾ-1 ರವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮತ್ತು ಕೋವಿಡ್ ನಿಯಮಾವಳಿಗಳಾದ ಮುಖಕ್ಕೆ ಮಾಸ್ಕ ಧರಿಸದೇ ಇರುವುದು, ಸಾಮಾಜಿಕ ಅಂತರ ಕಾಯಿದು ಕೊಳ್ಳದೇ ಇರುವುದು, ಸ್ಯಾನಿಟೈಜರ್ ಮತ್ತು ಥರ್ಮಲ್ ಸ್ಕ್ರಿನಿಂಗ್ ವ್ಯವಸ್ಥೆ ಕಲ್ಪಿಸದೇ ಇರುವುದು ಕಂಡು ಬಂದಿರುತ್ತದೆ ಈ ಬಗ್ಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ

ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿ ಪಿ 9 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದರು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:**

ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ